ಸಾಮ್ರಾಜ್ಯಶಾಹಿಯ 'ಕಾಯಂ ವಿರೋಧಿ' ಎನ್ನುವುದಕ್ಕೆ ಇವನ ಅರ್ಧ ಶತಮಾನದ ಹೋರಾಟ ಹಾಗೂ ನಿರ್ಭಯದಿಂದ ಕೂಡಿದ ಟೀಕೆಗಳೇ ಸಾಕ್ಷಿ.

ಅಮೆರಿಕ ಪ್ರಭುತ್ವದ ವಿರುದ್ಧ ಮಾತನಾಡುವ ಖ್ಯಾತಿಯಿರುವ ಏಕೈಕ ಭಿನ್ನಮತೀಯ ಅನಾರ್ಕಿಸ್ಟ್ ಚಿಂತಕ ಚಾಮ್‌ಸ್ಕಿ. ಅಮೆರಿಕದ 'ದಿ ನ್ಯೂಯಾರ್ಕ್ ಟೈಮ್ಸ್ ಬುಕ್ ರಿವ್ಯೂ' ಚಾಮ್‌ಸ್ಕಿ ಬಗ್ಗೆ ಒಮ್ಮೆ ಹೀಗೆ ಬರೆದಿದೆ: 'ಅವರ ಆಲೋಚನೆಗಳ ಶಕ್ತಿ, ವ್ಯಾಪ್ತಿ, ನವೀನತೆ ಮತ್ತು ಪ್ರಭಾವದ ವಿಷಯದಲ್ಲಿ, ನೋಮ್ ಚಾಮ್‌ಸ್ಕಿ ಬಹುಶಃ ಇಂದು ಜೀವಂತವಾಗಿರುವ ಅತ್ಯಂತ ಪ್ರಮುಖ ಬುದ್ಧಿಜೀವಿ'. ಚರಿತ್ರೆಯಲ್ಲಿ ಚಾಮ್‌ಸ್ಕಿಯನ್ನು ಮತ್ತು ಆತನ ತಾತ್ವಿಕತೆಯನ್ನು ಡಾರ್ವಿನ್, ಫ್ರಾಯ್ಡ್, ಅರಿಸ್ಟಾಟಲ್ ಮತ್ತು ಡೆಕಾರ್ಟೆ (ಡೆಕಾರ್ಟಸ್) ಅವರಷ್ಟೇ ಪ್ರಮುಖ ಮತ್ತು ಅವರಿಗೆ ಸಮಸಮನಾಗಿ ಗುರುತಿಸಲಾಗಿದೆ ಅನ್ನುವುದು ಗಮನಾರ್ಹ. ಅಂದರೆ ಜಗತ್ತಿನ ಹತ್ತು ಪ್ರಖ್ಯಾತ ವಿದ್ವಾಂಸರಲ್ಲಿ ಚಾಮ್‌ಸ್ಕಿಯನ್ನು ಒಬ್ಬನನ್ನಾಗಿ ಗುರುತಿಸಲಾಗಿದೆ.

ಡೆರೆಕ್ ಬೈರ್ಟನ್ (1988) ಎಂಬ ಪ್ರಮುಖ ಭಾಷಾಶಾಸ್ತ್ರಜ್ಞ ಚಾಮ್‌ಸ್ಕಿಯನ್ನು 'ಭಾಷಾಶಾಸ್ತ್ರದ ನ್ಯೂಟನ್' ಎಂದು ಬಣ್ಣಿಸಿದ್ದಾನೆ. ಪ್ರಸ್ತುತ ಯುಗದ ಅತ್ಯಂತ ಗಮನಾರ್ಹವಾದ ಬೌದ್ಧಿಕ ಸಾಧನೆಯೆಂದರೆ ಅದು ನೋಮ್ ಚಾಮ್‌ಸ್ಕಿ ಎಂದೂ ಮಾರ್ಮಿಕವಾಗಿ ಮತ್ತೊಂದು ಕಡೆ ಬಣ್ಣಿಸಲಾಗಿದೆ. ಆಧುನಿಕ ಕಾಲದ ಪ್ರಮುಖ ಬುದ್ಧಿಜೀವಿಗಳ ಪೈಕಿ ಚಾಮ್‌ಸ್ಕಿ ಅಗ್ರಸ್ಥಾನದಲ್ಲಿದ್ದಾನೆ. 'ಮನುಷ್ಯನಾಗುವುದೆಂದರೇನು?' ಎಂಬುದನ್ನು ಹಾಗೂ ಅಂತಹ ತಾತ್ವಿಕ ಗೊಂದಲವನ್ನು ಕುರಿತು ಯೋಚಿಸುವ ಬಗೆಯನ್ನೇ ಬದಲಾಯಿಸಿದ್ದು ಈ ವ್ಯಕ್ತಿಯ ಅಗ್ಗಳಿಕೆ. ಹಾಗಾಗಿ ಅರಿವಿನ ಚರಿತ್ರೆಯಲ್ಲಿಯೇ ಈತನಿಗೆ ವಿಶೇಷ ಸ್ಥಾನವಿದೆ. ತತ್ಪರಿಣಾಮವಾಗಿ ಗೆಲಿಲಿಯೋ, ಡೆಕಾರ್ಟೆ ಇಲ್ಲವೇ ನ್ಯೂಟನ್ ಮೊದಲಾದ ಚಿಂತಕರೊಂದಿಗೆ ಚಾಮ್‌ಸ್ಕಿಯನ್ನು ಹೋಲಿಸಲಾಗಿದೆ. ಈ ಎಲ್ಲ ಹೋಲಿಕೆ ಮತ್ತು ಸಮೀಕರಣಗಳು ಚಾಮ್‌ಸ್ಕಿಯ ಚಿಂತನೆಗಳ ಪ್ರಖರತೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ.

ಅವ್ರಾಮ್ ನೋಮ್ ಚಾಮ್‌ಸ್ಕಿ (ಸಾಮಾನ್ಯವಾಗಿ ಚೋಮ್ಸ್ಕಿ ಅಥವಾ ಚಾಮ್ಸ್ಕಿ, ಇಂಗ್ಲಿಷ್ ಅವ್ರಾಮ್ ನೋಮ್ ಚೋಮ್ಸ್ಕಿ ಎಂದು ಲಿಪ್ಯಂತರಿಸಲಾಗಿದೆ) ಅಮೆರಿಕದ ಪೆನ್ಸಿಲ್ವೇನಿಯಾದ ಫಿಲಡೆಲ್ಫಿಯಾದಲ್ಲಿ ಡಿಸೆಂಬರ್ 7, 1928 ರಂದು ಜನಿಸಿರುವುದು. ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಮೈಸ್ಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರಾಧ್ಯಾಪಕ ಹುದ್ದೆ 1955ರಲ್ಲಿ ಲಭಿಸಿತು. ಪ್ರಾಯೋಗಿಕ ವಿಜ್ಞಾನಿಗಳ ವಿಭಾಗದಲ್ಲಿ ಚಾಮ್‌ಸ್ಕಿಗೆ ಸ್ವತಂತ್ರ ಅಧಿಕಾರವನ್ನು ಕೊಟ್ಟಿದ್ದರಿಂದ, ಅಲ್ಲಿ ಭಾಷಾಶಾಸ್ತ್ರ ಹಾಗೂ ತತ್ವಶಾಸ್ತ್ರ ವಿಭಾಗಗಳನ್ನು ಸ್ಥಾಪಿಸಲು ಅವರಿಗೆ ಸಾಧ್ಯವಾಯಿತು. ಕೆಲವೇ ಕೆಲವು ದಿನಗಳಲ್ಲಿ, ಈ ವಿಭಾಗವು ಪ್ರಗತಿಪರ ಮತ್ತು ಹೊಸ ಬದಲಾವಣೆಯ ಭಾಷಾಶಾಸ್ತ್ರದ ಪ್ರಮುಖ ಸಂಶೋಧನೆಯ ಕೇಂದ್ರವಾಗಿ ಹೊರಹೊಮ್ಮಿತು ಹಾಗೂ ಜಾಗತಿಕಮಟ್ಟದಲ್ಲಿ ಹೆಸರನ್ನು ಮಾಡಿತು. ಈ ಪೀಠಿಕೆಯ ಮಾತುಗಳನ್ನು ಕೇವಲ ಚಾಮ್‌ಸ್ಕಿಯ ಹಿರಿಮೆಯನ್ನು ಹೆಚ್ಚಿಸಲು ಹೇಳುತ್ತಿರುವುದಲ್ಲ. ಬದಲಾಗಿ ಚಾಮ್‌ಸ್ಕಿಯ ಚಿಂತನಾಕ್ರಮದ ಮಹತ್ವ ಹಾಗೂ ಈ ಹೊತ್ತಿಗೆ ಅಗತ್ಯವಾಗದ ವೈಚಾರಿಕತೆಯ ತೀವ್ರತೆಯನ್ನು ಗುರುತಿಸಲು ಹೇಳಲಾಗಿದೆ.

**ಕನ್ನಡಕ್ಕೆ ಚಾಮ್‌ಸ್ಕಿ ಏಕೆ ಮುಖ್ಯ?**

ನೋಮ್ ಚಾಮ್‌ಸ್ಕಿಯನ್ನು ಕುರಿತು ಕನ್ನಡದಲ್ಲಿ ಬರೆಯುವುದು ಎಂದರೆ ಅದು ಅವರ ಚಿಂತನೆಗಳನ್ನು ಕನ್ನಡ ನುಡಿಯಲ್ಲಿ ಮರು ನಿರೂಪಿಸುವುದಲ್ಲ, ಬದಲಾಗಿ ಇಂತಹ ವೈಚಾರಿಕ ವಿನ್ಯಾಸಗಳನ್ನು ಕರ್ನಾಟಕ ಇಲ್ಲವೇ ಭಾರತದ ಸಮೂಹಗಳ ಬದುಕಿನ ದಾರಿಗಳನ್ನು ಹೇಗೆ ರೂಪಿಸಿಕೊಳ್ಳಬೇಕು ಅನ್ನುವ ಬಿಕ್ಕಟ್ಟಿಗೆ ಪರಿಹಾರಗಳನ್ನಾಗಿ ಪರಿಗಣಿಸಬೇಕಾಗಿದೆ. ಅಂದರೆ ಚಾಮ್‌ಸ್ಕಿಯ ಚಿಂತನೆಗಳನ್ನು ಕನ್ನಡ ನುಡಿಯಲ್ಲಿ ಮರು ನಿರೂಪಿಸುವುದು ತಪ್ಪು ಎಂದು ಹೇಳುತ್ತಿಲ್ಲ, ಈ ನಿಲುವಿಗೆ ಹೊರತಾದ ಹಾದಿಯನ್ನು ಪ್ರಸ್ತುತ ಟಿಪ್ಪಣಿಯಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಏಕೆಂದರೆ ಭಾರತದ ಸಂದರ್ಭದಲ್ಲಿ ವೈಚಾರಿಕವಾಗಿ ಚಿಂತಿಸುವ ಬಹುತೇಕ ಬರಹಗಾರರು, ಚಿಂತಕರು ಹಾಗೂ ಹೋರಾಟಗಾರರು ಅನುಸರಿಸುವ ವೈಚಾರಿಕ ಮಾದರಿಗಳು ನಮ್ಮ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ವಿನ್ಯಾಸಗಳಿಗೆ ಪೂರಕವಾಗಿ ನೆಲೆಪಡೆಯದೇ